ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ಅಧಿಕಾರಿಗಳಿಗೆ ಯಾವಾಗ ಅಧಿಕಾರವನ್ನು ಕೊಟ್ಟಿರಿ ?

†ಶ್ರೀ ಎಸ್. ಆರ್. ಕಂಠಿ.—1963ನೇ ಇಸವಿ ಜೂಲೈ 20ನೇ ತಾರೀಖಿನ ದಿವಸ ಅವರಿಗೆ ಅಧಿಕಾರವನ್ನು ಕೊಡಲಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅವರನ್ನು ನೇಮಕ ಮಾಡಿದ ಮೇಲೆ ಅವರಿಗೆ ಎಷ್ಟು ವರ್ಷಗಳ ಬಳಿಕ ಪವರ್ಸ್ ಕೊಟ್ಟಿರಿ ?

ಶ್ರೀ ಎಸ್. ಆರ್. ಕಂಠಿ.—ಅವರಿಗೆ ಅಧಿಕಾರಗಳು ಇದ್ದಿಲ್ಲ ಎಂದಲ್ಲ. ಡೆಫಿನೆಟ್ ಪವರ್ಸ್ ಅನ್ನು ಅವರಿಗೆ ಅಸೈನ್ ಮಾಡಿದ್ದು 1963ನೇ ಇಸವಿ ಜೂಲೈ 20ನೇ ತಾರೀಖಿನ ದಿವಸ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈಗ ಯಾವುದಾದರೂ ಒಂದು ಆಫೀಸನ್ನು ತೆಗೆಯಬೇಕಾದರೆ, ಆ ಆಫೀಸರಿಗೆ ಏನು ಅಧಿಕಾರ ಇದೆ ಎಂಬುದನ್ನು ನಿಗದಿ ಮಾಡಿ ಆಮೇಲೆ ಆ ಆಫೀಸರನ್ನು ನೇಮಕ ಮಾಡುತ್ತೀರೋ ಅಥವಾ ನೇಮಕ ಮಾಡಿ ಒಂದೆರಡು ವರ್ಷಗಳಾದ ಮೇಲೆ ಅವರಿಗೆ ಪವರ್ಸ್ ಕೊಡುತ್ತಿದ್ದಿರೋ ?

ಶ್ರೀ ಎಸ್. ಆರ್. ಕಂಠಿ.—ಪವರ್ಸ್ ಇದ್ದಿಲ್ಲ, ಪವರ್ಸ್ ಎಕ್ಸರ್‌ಸೈಜ್ ಮಾಡುತ್ತಿಲ್ಲ ಎಂದಲ್ಲ. ಅವರಿಗೆ ಡೆಫಿನೆಟ್ ಪವರ್ಸ್ ಅಸೈನ್ ಮಾಡಿದ್ದು 1963ನೇ ಇಸವಿ ಜೂಲೈ 20ನೆಯ ತಾರೀಖು.

ಶ್ರೀ ಕೆ. ಎಚ್. ರಂಗನಾಥ್.—34 ಜನಗಳಲ್ಲಿ 1959, 1960 ಮತ್ತು 1961ರಲ್ಲಿ ಎಷ್ಟೆಷು ಅಪಾಯಿಂಟ್‌ಮೆಂಟ್ ಮಾಡಲಾಯಿತು ?

ಶ್ರೀ ಎಸ್. ಆರ್. ಕಂಠಿ.—4-11-1959ರಲ್ಲಿ 9 ಜನಗಳನ್ನೂ, 4-8-1960ರಲ್ಲಿ 7 ಜನಗಳನ್ನೂ, ಮತ್ತು 27-10-1961ರಲ್ಲಿ 18 ಜನಗಳನ್ನೂ ನೇಮಕ ಮಾಡಲಾಯಿತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಂಪಲ್‌ಸರಿ ಶಿಕ್ಷಣವನ್ನು ಜಾರಿಗೆ ತಂದಮೇಲೆ ಉಪಾಧ್ಯಾಯರು ಇಲ್ಲದೆ ಇರುವಾಗ ಕಡ್ಡಾಯ ಶಿಕ್ಷಣದ ಸಂಬಂಧದಲ್ಲಿ ಎಕ್ಸ್‌ಪೆನ್ಸ್ ಮಾಡುತ್ತಾರೆ; ಅವರ ಮೇಲೆ ಸೂಪರ್‌ವೈಜ್ ಮಾಡುತ್ತಾರೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಉಪಾಧ್ಯಾಯರು ಇಲ್ಲದೆ ಇದ್ದಾಗ ಕಡ್ಡಾಯ ಶಿಕ್ಷಣದ ಬಗ್ಗೆ ಏನು ಎಕ್ಸ್‌ಪೆನ್ಸ್ ಮಾಡುತ್ತಾರೆ ?

ಶ್ರೀ ಎಸ್. ಆರ್. ಕಂಠಿ.—ಉಪಾಧ್ಯಾಯರು ಇಲ್ಲ ಎಂದು ಹೇಳುವುದು ತಪ್ಪು. ಉಪಾಧ್ಯಾಯರು ಇದ್ದಾರೆ. ಸಾಕಷ್ಟು ಇಲ್ಲ ಎಂದು ಹೇಳಿದರೆ ನಾನು ಕೆಲವು ಮಟ್ಟಿಗೆ ಒಪ್ಪುತ್ತೇನೆ.

Sri N. O. SAMAJI.—[*Spoke in Marathi*].

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಮರಾಠಿ ಅಥವಾ ಕನ್ನಡ ಪ್ರಶ್ನೆ ಬರುವುದಿಲ್ಲ. A.E.Os ಅನ್ನು ಬೊಂಬಾಯಿ ಕರ್ನಾಟಕವೆ ಏರಿಯಾ ಬಿಟ್ಟು ಉಳಿದ ಕಡೆಗಳಲ್ಲಿ ನೇಮಕ ಮಾಡಿದ್ದೇವೆ. ಬೊಂಬಾಯಿ ಕರ್ನಾಟಕ ಏರಿಯಾದಲ್ಲಿ ಸ್ಕೂಲ್ ಬೋರ್ಡ್ ಇರುವುದರಿಂದ ಅಲ್ಲಿಯ ಸಿಸ್ಟಂ ಬೇರೆ ಇದೆ. ಆ ಸಿಸ್ಟಂ ಇಲ್ಲಲ್ಲ. ಮರಾಠಿ ಪ್ರಶ್ನೆ ಇಲ್ಲಿ ಬರುವುದಿಲ್ಲ. ಇವೊತ್ತು ಬೆಳಗಾವಿನಲ್ಲಿಯೂ ಕೂಡ ಸ್ಕೂಲ್ ಬೋರ್ಡ್ ಇದೆ.

Amount of Money granted for the construction of Primary School Buildings in Chamarajanagar Taluk.

*Q.—318. Sri M. C. BASAPPA (Chamarajanagar).—

Will the Government be pleased to state :—

(*a*) the total amount of money granted to Chamarajanagar Taluk for the construction of primary school buildings for the year 1962-63.

(*b*) the amount spent so far ?

A.—Sri S. R. KANTHI (Minister for Education).—

(*a*) Rs. 4,509

(*b*) Rs. 3,884

ಶ್ರೀ ಎಂ. ಸಿ. ಬಸಪ್ಪ.—ಶಾಲೆಗಳನ್ನು ಕಟ್ಟುವುದಕ್ಕೋಸ್ಕರ ಎಷ್ಟು ಗ್ರಾಂಟನ್ನು ಕೊಡಲಾಗಿದೆ ?

†ಶ್ರೀ ಎಸ್. ಆರ್. ಕಂಠಿ.—ಎಲ್ಲಾ ಸೇರಿ, ಒಟ್ಟು 4,509 ರೂಪಾಯಿಗಳನ್ನು ಶಾಲೆಗಳನ್ನು ಕಟ್ಟುವುದಕ್ಕೋಸ್ಕರ ಕೊಡಲಾಗಿದೆ.